

# ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಯಿಷ್ ಆಯ್ದದ್ದು. [ನಂ. 42.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ|| 29, ಸ್ 1903.

## IIನೆ ಭಾಗ.

ಇಲಾಖೆಗಳ ಪರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ಮತ್ತು ರೇವಿನ್ಯೂ ಬೋರ್ಡಿಂದ ಹೊರಡಿಸಲ್ಪಟ್ಟ ಇಸ್ತಿಹಾರ್‌ನಾಮೆಗಳು.

### ಮೈಸೂರ ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್ ಇಲಾಖೆ.

### ಇಸ್ತಿಹಾರ್‌ನಾಮೆ.

ತಾರೀಖು 10ನೆ ಅಕ್ಟೋಬರ್ 1903.

ನಂಬರು 360, ಸಮಸ್ತ ಜನಗಳಿಗೂ ತಿಳಿಯುವದಕ್ಕೋಸ್ಕರ ಈ ಮೂಲಕ ಘಾಯಿಷ್ ಮಾಡುವದೇನಂದರೆ, 1903ನೆ ಇಸವಿ ನೊವೆಂಬರ್ ಗುರ್ಯೆ ತಾರೀಖಿನಲ್ಲಿ ಅಥವಾ ಆ ತರುವಾಯ ಕ್ಷಿಪ್ರದಲ್ಲಿ ಬೆಂಗಳೂರ ಡಿಸ್ಟ್ರಿಕ್ಟಿಗೆ ಕೀಂದ ಬೆಂಗಳೂರ ತಾಲ್ಲೂಕಿನಲ್ಲಿ ರೀ-ಸರ್ವೆ ಕೆಲಸಗಳು ಪ್ರಾರಂಭಿಸಲ್ಪಡುವವು.

ನಂಬರು 417, ತಾರೀಖು 27ನೆ ಅಕ್ಟೋಬರ್ 1903.

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವದಕ್ಕೋಸ್ಕರ ಪ್ರಕಟಿಸಲ್ಪಡುವದೇನಂದರೆ,—ಚಿತ್ರದುರ್ಗ ಡಿಸ್ಟ್ರಿಕ್ಟು ಡಾವಣಗೇರಿ ತಾಲ್ಲೂಕಿನ 255 ಸರಕಾರಿ ಗ್ರಾಮಗಳ ರಿವಿಜೆ ಸರ್ವೆ ಜಮಾಬಂದಿಯಾನೆ ತಿದ್ದುಪಡಿಯಾದ ಸರ್ವೆ ಆಕಾರವು ಗವರ್ನ್‌ಮೆಂಟನವರಿಂದ ಮಂಜೂರ್ಮಾಡಲ್ಪಟ್ಟರುವದ್ದರಿಂದ ಲ್ಯಾಂಡ್ ರೆವಿನ್ಯೂ ಕೋಡ್ 113ನೆ ಸೆಕ್ಷನ್ ಮೇರಿಗೆ ಅದನ್ನು ಬಹಿರಂಗವಾಗಿ ಘಾಯಿಷ್ಮಾಡಲ್ಪಡುವ ಕೆಲಸವೂ ಸ್ 1903ನೆ ಇಸವಿ ನವಂಬರು 25ನೆ ತಾರೀಖಿನಲ್ಲಿ ಅಥವಾ ಆ ಸುಮಾರಿನಲ್ಲಿ ದಾವಣಗೇರೆಯಲ್ಲಿ ಪ್ರಾರಂಭಿಸಲ್ಪಡುವದು.

ಜೆ. ಪಿ. ಗ್ಯಾಂಟ್,
ಸರ್ವೆ ಮತ್ತು ಸೆಟ್ಲ್‌ಮೆಂಟ್ ಕಮಿಷನರ್, ಮೈಸೂರ್.

### ಫಾರೆಸ್ಟ್ ಇಲಾಖೆ.

### ನೋಟಿಸ್.

ತಾರೀಖು 9ನೆ ಅಕ್ಟೋಬರ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ: ಹಾಲಿ ಕೆಲಸದಿಂದ ನಿವೃತ್ತಿ ಮಾಡಲ್ಪಟ್ಟಿರುವ ಫಾರೆಸ್ಟ್ ಗಾರ್ಡು ಭೀಮಂಣ ಎಂಬವನಿಗೆ ಸಲ್ಲಬೇಕಾದ 1901ನೆ ಇಸವಿ ಮೇ, ಜುಲೈ ಮತ್ತು ಆಗಸ್ಟು ಮಾಹಗಳ ಭತ್ಯೆ ಮೊಬಲಗು ರೂ. 5—2—6 ಹೊಳಲ್ಕೆರೆ ಫಾರೆಸ್ಟ್ ರೇಂಜು ಆಫೀಸಿನಲ್ಲಿರುತ್ತದೆ. ಸದರಿ ಭೀಮಂಣನಾಗಲಿ ಅಥವಾ ಅವನ ನ್ಯಾಯವಾದ ಹಕ್ಕುದಾರನಾಗಲಿ ಈ ತಾರೀಖು ಲಾಗಾಯಿತು ಎರಡು ತಿಂಗಳೊಳಗಾಗಿ ಹೊಳಲ್ಕೆರೆ ಫಾರೆಸ್ಟ್ ರೇಂಜು ಆಫಿಸರವರಲ್ಲಿ ಹಾಜರಾಗಿ ಅವರಿಗೆದ ಮೇಲ್ಕಂಡ ರೂ. 5—2—6ನ್ನು ತೆಗದುಕೊಳ್ಳಲು ತಪ್ಪಿದಲ್ಲಿ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲಾಗುತ್ತೆ.

ಕೆ. ಶಾಮಯ್ಯಂಗಾರ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟ್.